Sri **SAIRAM**
**COLLEGE OF ENGINEERING**
Anekal, Bengaluru

# VK ವಿಜಯ ಕರ್ನಾಟಕ

**Date: 03.10.2018**

**Edition: Namma Bengaluru**

## Newspaper - Vijay Karnataka



ಕಾರ್ಯಕ್ರಮದಲ್ಲಿಗಾಯಕಿ ಬಿ.ಕೆ.ಸುಮಿತ್ರ ಅವರನ್ನು ಸನ್ಮಾನಿಸಲಾಯಿತು.

### 'ವಿದ್ಯೆಯನ್ನು ಮೊಗೆದು ಕುಡಿಯಬೇಕು'

**ಆನೇಕಲ್:** ವಿದ್ಯೆ ಎಂಬುದು ಸಮುದ್ರವಿದ್ದಂತೆ. ವಿದ್ಯಾರ್ಥಿಗಳು ಎಷ್ಟು ಸಾಧ್ಯವೋ ಅಷ್ಟು ವಿದ್ಯೆಯನ್ನು ಬೊಗಸೆಯಲ್ಲಿ ಮೊಗೆದು ಕುಡಿಯಬೇಕು ಎಂದು ಹಿನ್ನೆಲೆ ಗಾಯಕಿ ಡಾ.ಬಿ.ಕೆ.ಸುಮಿತ್ರ ಹೇಳಿದರು.

ಇಲ್ಲಿಗೆ ಸಮೀಪದ ಗುಡ್ನಹಳ್ಳಿ ಬಳಿಯಿರುವ ಶ್ರೀಸಾಯಿರಾಂ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಗಣಕಯಂತ್ರ ವಿಭಾಗ ಆಯೋಜಿಸಿದ್ದ 'ಆದ್ವಯ ಉತ್ಸವ-2018' ಉದ್ಘಾಟಿಸಿ ಮಾತನಾಡಿದರು.

ಕಾಲೇಜಿನ ಹಳೇ ವಿದ್ಯಾರ್ಥಿನಿ ಶ್ವೇತಾ ಅವರು ಕನ್ನಡ, ತೆಲುಗು, ತಮಿಳು ಮತ್ತು ಹಿಂದಿ ಚಲನಚಿತ್ರ ಗೀತೆಗಳನ್ನು ಹಾಡಿ ವಿದ್ಯಾರ್ಥಿಗಳನ್ನು ರಂಜಿಸಿದರು.ವಿದ್ಯಾರ್ಥಿನಿ ಕು.ಸೋನಲ್ ಭರತನಾಟ್ಯ ಪ್ರದರ್ಶಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ ವೈ ವಿಜಯಕುಮಾರ್ ಮತ್ತಿತರರು ಇದ್ದರು. ಸಂಪರ್ಕ ಅಧಿಕಾರಿ ಕೆ ಪಟೇಲ್, ಆಡಳಿತ ಮಂಡಳಿ ಪ್ರತಿನಿಧಿ ಡಾ ಆರ್ ಅರುಣ್‌ಕುಮಾರ್ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ವಿಜೇತ ವಿದ್ಯಾರ್ಥಿ ಗಳಿಗೆ ಬಹುಮಾನ ವಿತರಿಸಿದರು.

**Page No.2**

MJF.LN. LEO MUTHU
Founder Chairman - Sairam Institutions

Sairam INSTITUTIONS

Sri
# SAIRAM
## COLLEGE OF ENGINEERING
Anekal, Bengaluru

# ವಿಜಯವಾಣಿ
ಕನ್ನಡಿಗರ ಧ್ವನಿ

**Date: 29.09.2018**

**Edition: Bengaluru (Gramanthara)**

## Newspaper - Vijayavani

# ವಿದ್ಯೆಯೂ ಸಮುದ್ರದಂತೆ ವಿಶಾಲವಾದದ್ದು

ಆನೇಕಲ್: ವಿದ್ಯೆ ಸಮುದ್ರವಿದಂತೆ ಎಂಬುದನ್ನು ಅರಿತು ವಿದ್ಯಾರ್ಥಿಗಳು ಇನ್ನು ಹೆಚ್ಚು ಕಲಿಯಬೇಕು ಎಂದು ಹಿನ್ನೆಲೆ ಗಾಯಕಿ ಡಾ.ಬಿ.ಕೆ.ಸುಮಿತ್ರಾ ಹೇಳಿದರು. ಶ್ರೀ ಸಾಯಿರಾಂ ಕಾಲೇಜ್ ಆಫ್ ಇಂಜಿನಿಯರಿಂಗ್ ಗಣಕಯಂತ್ರ ವಿಭಾಗದಿಂದ ಶುಕ್ರವಾರ ಹಮ್ಮಿಕೊಂಡಿದ್ದ ಅದ್ವಯ ಉತ್ಸವ-2018 ಕಾರ್ಯಕ್ರಮದಲ್ಲಿ ಮಾತನಾಡಿದರು. ವಿದ್ಯೆ ಎಷ್ಟು ಕಲಿತರೂ ಕಡಿಮೆ. ಸೋಲು ಕಂಡಾಗ ಮಾನಸಿಕ ಸ್ಥೈರ್ಯ ಕಳೆದುಕೊಳ್ಳದೆ ವಿಶ್ವಾಸದಿಂದ ಮತ್ತೆ ಪ್ರಯತ್ನಿಸಬೇಕು ಎಂದು ಕಿವಿಮಾತು ಹೇಳಿದರು. ಪ್ರಾಂಶುಪಾಲ ಡಾ.ವೈ.ವಿಜಯಕುಮಾರ್ ಮಾತನಾಡಿದರು. ಉಪಪ್ರಾಂಶುಪಾಲ ಡಾ.ಬಿ.ಷಡಾಕ್ಷರಪ್ಪ, ಖಜಾಂಚಿ ಕೆ.ಗಜೇಂದ್ರ, ವ್ಯವಸ್ಥಾಪಕ ಮಹೇಶ್ವರ್ ವಿಜಯಲಕ್ಷ್ಮೀ, ಗಣಕಯಂತ್ರ ವಿಭಾಗ ಪ್ರಾಧ್ಯಾಪಕಿ ಜಿ.ಮಂಜುಳಾ, ಕೆ. ಪಟೇಲ್, ಡಾ.ಆರ್.ಅರುಣ್‌ಕುಮಾರ್ ಇದ್ದರು. ವಿದ್ಯಾರ್ಥಿ ಸುಜಯ್ ಮತ್ತು ಸಂಗಡಿಗರು ಅದ್ವಯ ಹಾಡನ್ನು ಹಾಡಿದರು.

**Page No.4**

MJF. LN. LEO MUTHU
Founder Chairman - Sairam Institutions

Sairam
INSTITUTIONS

Sri SAIRAM
COLLEGE OF ENGINEERING
Anekal, Bengaluru

# ಕನ್ನಡಪ್ರಭ

**Date: 15.10.2018** **Edition: Bengaluru**

## Newspaper - Kannada Prabha



ಆನೇಕಲ್‌ನ ಶ್ರೀ ಸಾಯಿರಾಂ ಎಂಜಿನಿಯರಿಂಗ್ ಕಾಲೇಜಿನ ಅಧ್ವಯ-18 ಉತ್ಸವದಲ್ಲಿ ಗಾಯಕಿ ಡಾ.ಬಿ.ಕೆ.ಸುಮಿತ್ರಾ ಅವರನ್ನು ಪ್ರಾಂಶುಪಾಲ ಡಾ.ವಿಜಯ್‌ಕುಮಾರ್, ಡಾ.ಷಡಕ್ಷರಪ್ಪ, ಡಾ.ಅರುಣ್‌ಕುಮಾರ್ ಸನ್ಮಾನಿಸಿ ಗೌರವಿಸಿದರು.

### ಸತತ ಯತ್ನದಿಂದ ಉಜ್ವಲ ಭವಿಷ್ಯ: ಬಿ.ಕೆ.ಸುಮಿತ್ರಾ

ಆನೇಕಲ್: ಕಾಲ ಬದಲಾದಂತೆ ಅಧ್ಯಯನ ಕ್ರಮವೂ ಬದಲಾಗಿದೆ. ಜಾಗತಿಕ ಪ್ರಪಂಚದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮಾದರಿಯ ಸವಾಲುಗಳಿದ್ದು, ಕೌಶಲ್ಯ ಯುಕ್ತ ಕಲಿಕೆಯ ಮೂಲಕ ವಿದ್ಯಾರ್ಥಿಗಳು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಖ್ಯಾತ ಹಿನ್ನೆಲೆ ಗಾಯಕಿ ಡಾ.ಬಿ.ಕೆ.ಸುಮಿತ್ರಾ ತಿಳಿಸಿದರು. ಅವರು ಆನೇಕಲ್‌ನ ಶ್ರೀ ಸಾಯಿರಾಂ ಎಂಜಿನಿರಿಂಗ್ ಕಾಲೇಜಿನ ಅಧ್ವಯ-2018 ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿ, ವಿದ್ಯೆ ಎಂಬುದು ಸಾಗರದಷ್ಟು ಅಗಲ ಮತ್ತು ಆಳವಾಗಿದೆ. ಕಲಿಕಾಸಕ್ತಿಯುಳ್ಳವರು ಎಷ್ಟು ಸಾಧ್ಯವೋ ಅಷ್ಟು ವಿದ್ಯೆಯನ್ನು ಮೆದುಳಿನಲ್ಲಿ ತುಂಬಿಕೊಳ್ಳಬೇಕು ಎಂದರು. ಪ್ರಾಂಶುಪಾಲ ಡಾ.ವೈ.ವಿಜಯಕುಮಾರ್, ಉಪ ಪ್ರಾಂಶುಪಾಲ ಡಾ.ಷಡಕ್ಷರಪ್ಪ, ಪ್ರಾಧ್ಯಾಪಕಿ ಜಿ.ಮಂಜುಳಾ, ಡಾ.ಆರ್.ಅರುಣ್‌ಕುಮಾರ್, ಪಿಆರ್‌ಒ ಕೆ.ಪಟೇಲ್, ಕೆ.ಗಜೇಂದ್ರ, ಮಹೇಶ್ವರ್, ಕುಮಾರಿ ಶ್ವೇತಾ ಉಪಸ್ಥಿತರಿದ್ದರು.



MJF.LN. LEO MUTHU
Founder Chairman - Sairam Institutions
Sairam INSTITUTIONS

Sri SAIRAM
COLLEGE OF ENGINEERING
Anekal, Bengaluru

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**Date: 07.10.2018**

**Edition: Bengaluru (Gramanthara)**

## Newspaper - Prajavani

# ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಶಿಕ್ಷಣ ಅವಶ್ಯಕ

## ಅದ್ವಯ ಉತ್ಸವ–2018: ಉದ್ಘಾಟಿಸಿ ಡಾ.ಬಿ.ಕೆ.ಸುಮಿತ್ರಾ ಅಭಿಮತ

ಪ್ರಜಾವಾಣಿ ವಾರ್ತೆ



ಗುಡ್ಡನಹಳ್ಳಿ ಸಮೀಪದ ಸಾಯಿರಾಮ್ ಕಾಲೇಜ್ ಆಫ್ ಇಂಜಿನಿಯರಿಂಗ್ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಅದ್ವಯ ಉತ್ಸವ–2018 ಕಾರ್ಯಕ್ರಮದಲ್ಲಿ ಗಾಯಕಿ ಡಾ.ಬಿ.ಕೆ.ಸುಮಿತ್ರಾ ಅವರನ್ನು ಸನ್ಮಾನಿಸಲಾಯಿತು

ಆನೇಕಲ್: ಶಿಕ್ಷಣ ವ್ಯಕ್ತಿತ್ವ ವಿಕಸನಕ್ಕೆ ಅತ್ಯಂತ ಅವಶ್ಯಕವಾದುದ್ದು, ಶಿಕ್ಷಣದ ಜೊತೆಗೆ ಸಾಹಿತ್ಯ, ಸಂಸ್ಕೃತಿ, ಸಂಗೀತದಲ್ಲೂ ಆಸಕ್ತಿಯನ್ನು ಬೆಳೆಸಿಕೊಂಡಾಗ ಬದುಕು ಸುಂದರಗೊಳ್ಳುತ್ತದೆ. ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ದಾರಿಯಾಗುತ್ತದೆ ಎಂದು ಗಾಯಕಿ ಡಾ.ಬಿ.ಕೆ.ಸುಮಿತ್ರಾ ತಿಳಿಸಿದರು.

ಅವರು ತಾಲ್ಲೂಕಿನ ಗುಡ್ಡನಹಳ್ಳಿ ಸಮೀಪದ ಸಾಯಿರಾಮ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನ ಕಂಪ್ಯೂಟರ್ ಸೈನ್ಸ್ ವಿಭಾಗದ ವತಿಯಿಂದ ಆಯೋಜಿಸಿದ್ದ ಅದ್ವಯ ಉತ್ಸವ-2018 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಶಿಕ್ಷಣ ಎಂಬುದು ಸಾಗರದಂತೆ ಮೊಗದಷ್ಟು ಮುಗಿಯುವುದೇ ಇಲ್ಲ. ಹಾಗಾಗಿ ವಿದ್ಯಾರ್ಥಿ ಜೀವನದ ಅವಧಿಯಲ್ಲಿ ಹೆಚ್ಚು ಹೆಚ್ಚು ಕಲಿಯಲು ಇರುವ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಆತ್ಮವಿಶ್ವಾಸವನ್ನು ಕಳೆದುಕೊಳ್ಳಬಾರದು. ಒಂದೆಡೆ ಸೋಲಿನ ಒಂದು ಬಾಗಿಲು ಮುಚ್ಚಿದರೆ ಮತ್ತೊಂದೆಡೆ ಯಶಸ್ಸಿನ ಬಾಗಿಲು ತೆರೆದುಕೊಳ್ಳುತ್ತದೆ ಎಂದರು.

ಶ್ರದ್ಧೆ, ಸತತ ಅಧ್ಯಯನದಿಂದ ಉನ್ನತವಾದುದ್ದನ್ನು ಸಾಧಿಸಬಹುದು. ಇದಕ್ಕೆ ಸಹಸ್ರಾರು ಜೀವಂತ ಉದಾಹರಣೆಗಳಿವೆ. ಶಿಕ್ಷಣದ ಜೊತೆಗೆ ಜೀವನವನ್ನು ಎದುರಿಸಬೇಕು. ವಿದ್ಯಾರ್ಥಿ ಜೀವನ ಬಂದಾರದಂತಹ ಬದುಕು ಇದನ್ನು ಸದುಪಯೋಗ ಪಡಿಸಿಕೊಳ್ಳಿ ಎಂದರು.

ಕಾಲೇಜಿನ ಹಳೆಯ ವಿದ್ಯಾರ್ಥಿ ಮೈನ್ಡ್ ಟ್ರೀ ಟೆಕ್ನಾಲಜಿಸ್ ಕಂಪನಿಯ ಶ್ವೇತಾ ಮಾತನಾಡಿ ವಿದ್ಯಾರ್ಥಿಗಳು ನವೀನ ಸಂಶೋಧನೆಗಳು ಹಾಗೂ ಪ್ರಾಜೆಕ್ಟ್‌ಗಳ ಬಗ್ಗೆ ಕ್ರಿಯಾತ್ಮಕವಾಗಿ ಆಲೋಚಿಸಿ ಹೊಸದನ್ನು ಶೋಧಿಸಬೇಕು. ಉಪನ್ಯಾಸಕರೊಂದಿಗೆ ಉತ್ತಮ ಬಾಂಧವ್ಯ, ಚರ್ಚೆ ನಡೆಸುವ ಮೂಲಕ ಅನುಮಾನಗಳನ್ನು ಪರಿಹರಿಸಿಕೊಳ್ಳಬೇಕು ಎಂದರು.

ಗಣಕಯಂತ್ರ ವಿಭಾಗವು ಆಯೋಜಿಸಿದ್ದ ಅದ್ವಯ-2018ರ ಉತ್ಸವದಲ್ಲಿ ಭರತನಾಟ್ಯ, ಕೇರಳ ಚಂಡೆ ಪ್ರದರ್ಶನ, ಗೀತ ಗಾಯನ, ವಿದ್ಯಾರ್ಥಿಗಳಿಗಾಗಿ ವಿವಿಧ ಕ್ರಿಯಾಶೀಲ ಚಟುವಟಿಕೆಗಳು ನಡೆದವು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾಲೇಜಿನ ಪ್ರಾಚಾರ್ಯ ಡಾ.ವೈ. ವಿಜಯ್‌ಕುಮಾರ್, ಉಪಪ್ರಾಚಾರ್ಯ ಡಾ.ಬಿ.ಷಡಕ್ಷರಪ್ಪ, ಕಾಲೇಜಿನ ಆಡಳಿತ ಮಂಡಳಿಯ ಡಾ.ಆರ್. ಅರುಣ್‌ಕುಮಾರ್, ಪಟೇಲ್, ಗಜೇಂದ್ರ, ಮಹೇಶ್ವರ್ ಹಾಜರಿದ್ದರು.



MJF.LN. LEO MUTHU
Founder Chairman - Sairam Institutions

Sairam INSTITUTIONS